ಸರ್ಕಾರ ಪಾಲಿಸಿದೆಯೇ ಹೊರತು ಕೇಂದ್ರ ಸರ್ಕಾರದಿಂದ ಒಂದು ರೂಪಾಯಿ ಹಣ ಬಂದಿಲ್ಲ. ಅಲ್ಲಿಂದ ಯಾವುದೇ ರೀತಿಯಾದ ಒಪ್ಪಿಗೆಯ ವಿಚಾರವೂ ಕೂಡ ನಮಗೆ ಬಂದಿಲ್ಲ। ಇದಕ್ಕೆ ಸಂಬಂಧಪಟ್ಟ ಹಾಗೆ ತಾವು ಯಾವುದೇ ಸಮಿತಿಗೆ ಬೇಕಾದರೂ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಿದ್ದಾರೆ. From the beginning ನಿಂದ ಸದನ ಸಮಿತಿಗೆ ಕೊಡಿ.

ಅಧ್ಯಕ್ಷರು:– ಸದನ ಸಮಿತಿಗೆ ಕೊಡೋಣ. ದಯವಿಟ್ಟು ಕುಳಿತುಕೊಳ್ಳಿ.

ಹಿಂದುಳಿದ ವರ್ಗಗಳ ವಸತಿನಿಲಯ

22 (173)

ಶ್ರೀ ಮಾನಪ್ಪ ವಜ್ಜಲ್ (ಲಿಂಗಸಗೂರು)

ಅ) ಲಿಂಗಸಗೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯವಿಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು? ಹೊಸದಾದ ವಸತಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ, ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ವಿವರ ನೀಡುವುದು.

ಶ್ರೀ ಎ. ನಾರಾಯಣಸ್ವಾಮಿ(ಮಾನ್ಯ ಸಮಾಜ ಕಲ್ಯಾಣ, ಬಂದೀಖಾನೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು).

ಅ) ಲಿಂಗಸಗೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿನಿಲಯವಿಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಪ್ರಸ್ತುತ ಲಿಂಗಸಗೂರು ತಾಲ್ಲೂಕಿನಲ್ಲಿ ಈ ಕೆಳಕಂಡಂತೆ ಈಗಾಗಲೇ 14 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ 1155 ವಿದ್ಯಾರ್ಥಿಗಳು ವಸತಿನಿಲಯದ ಸೌಲಭ್ಯ ಪಡೆಯುತ್ತಿದ್ದಾರೆ. ವಿವರ ಕೆಳಕಂಡಂತಿದೆ.

ಕ್ರ ಸಂ.	ವಿದ್ಯಾರ್ಥಿನಿಲಯದ ಹೆಸರು	ಮಂಜೂರಾತಿ ಸಂಖ್ಯೆ
1	ಮೆಟ್ರಿಕ್–ನಂತರದ ಪುರುಷ ವಿದ್ಯಾರ್ಥಿನಿಲಯ, ಲಿಂಗಸಗೂರು ಟೌನ್	125
2	ಮೆಟ್ರಿಕ್–ನಂತರದ ಮಹಿಳೆಯರ ವಿದ್ಯಾರ್ಥಿನಿಲಯ, ಲಿಂಗಸಗೂರು ಟೌನ್	175
3	ಮೆಟ್ರಿಕ್–ನಂತರದ ಪುರುಷ ವಿದ್ಯಾರ್ಥಿನಿಲಯ, ಮುದಗಲ್	125
4	ಮೆಟ್ರಿಕ್–ನಂತರದ ಮಹಿಳೆಯರ ವಿದ್ಯಾರ್ಥಿನಿಲಯ, ಲಿಂಗಸಗೂರು	100
5	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮಸ್ಕಿ	50
6	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಜ್ಜಲಗುಡ್ಡ	55
7	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಲಿಂಗಸಗೂರು	75
8	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮುದಗಲ್	100
9	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅನವೇರಿ	60
10	ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಲಿಂಗಸಗೂರು	60
11	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಂತೆಕಲ್ಲೂರು	60
12	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮದಕಿನಾಳ	70
13	ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಮುದಗಾಲ್	50
14	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮಟ್ಟೂರು	50
	ಒಟ್ಟು	**1155**

2012–13ನೇ ಸಾಲಿಗೆ ಸರ್ಕಾರಿ ಆದೇಶ ಸಂ.ಹಿವಕ 336 ಬಿಎಂಎಸ್ 2012, ದಿನಾಂಕ 13.12.2012ರಲ್ಲಿ ಲಿಂಗಸಗೂರು ಟೌನ್‌ಗೆ 100 ಸಂಖ್ಯಾಬಲದ ಮಹಿಳೆಯರ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯ ಮಂಜೂರು ಮಾಡಲಾಗಿದೆ.

ಲಿಂಗಸಗೂರು ತಾಲ್ಲೂಕಿಗೆ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಮನವಿಗಳು ಇರುತ್ತವೆ.

ನಿಲಯಗಳ ಬೇಡಿಕೆ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಪರಿಶೀಲಿಸಲಾಗುವುದು.

Backward Classes Hostels
Sri Manappa Vajjal (Lingasaguru)
22 (173)

1. Whether it has come to the notice of the Government that students of Lingasuguru taluk are deprived of Hostels.

2. If so, what is the action taken by the Government? Is there a proposal before the Government for sanction of new hostels? Details to be given.

A.NARAYANASWAMY (Minister for Social Welfare, Prisons & Backward Classes Welfare)

1. No

2. Presently the following 14 hostels are functioning in Lingasugur Taluk.

SL. No.	Name of the Hostel	Strength
1	Post-Metric Boys Hostel, Lingasugur Town	125
2	Post-Metric Girls Hostel, Lingasugur Town	175
3	Post-Metric Boys Hostel, Mudagal	125
4	Post-Metric Girls Hostel, Lingasuguru	100
5	Pre-Metric Boys Hostel, Masky	50
6	Pre-Metric Boys Hostel, Sajjalagudda	55
7	Pre-Metric Boys Hostel, Lingasugur	75
8	Pre-Metric Boys Hostel, Mudagal	100
9	Pre-Metric Boys Hostel, Anaveri	60
10	Pre-Metric Girls Hostel, Lingasugur	60
11	Pre-Metric Boys Hostel, Santhekallur	60
12	Pre-Metric Boys Hostel, Madakinala	70
13	Pre-Metric Girls Hostel, Mudagal	50
14	Pre-Metric Boys Hostel, Mattur	50
	Total	**1155**

During 2012-13 Government vide order No. BCW/336/BMS/2012, Dated: 13.12.2012 has sanctioned a post metric girls hostel of 100 strength to Lingasugur town.

There are requistions received for sanctioned of hostels in Lingasugur Taluk.

Sanctioned of new hostels will be examined as per demand and subject to availability of funds.

ಶ್ರೀ ಮಾನಪ್ಪ ವಜ್ಜಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನೀಡಿರುವ ಉತ್ತರ ಅಷ್ಟು ತೃಪ್ತಿಕರವಾಗಿಲ್ಲವೆನಿಸುತ್ತಿದೆ. ನಾನು ಕೇಳಿರುವುದು ಲಿಂಗಸೂಗೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯವಿಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು. ಮಾನ್ಯ ಸಚಿವರು ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಈ ಬಗ್ಗೆ ನಾನು ಸುಮಾರು ಐದು ವರ್ಷಗಳಿಂದ ಬೇಡಿಕೆಯನ್ನು ಇಡುತ್ತಿದ್ದೇನೆ. ವಿದ್ಯಾರ್ಥಿಗಳಲ್ಲಿರುವ ದೂರು, ಬಾಡಿಗೆ ಕಟ್ಟಡಗಳಲ್ಲಿ ಹಾಸ್ಟೆಲ್‌ಗಳನ್ನು ನಡೆಸುತ್ತಿರುವುದು, ಒಂದೊಂದು ಕೋಣೆಯಲ್ಲಿ ಸುಮಾರು 15, 20, 25 ವಿದ್ಯಾರ್ಥಿಗಳನ್ನು ಹಾಕಿದರೆ ಕೂಡುವುದಕ್ಕೆ ಜಾಗವಿಲ್ಲ. ಇನ್ನೂ ಮಲಗುವುದು ಬಹಳ ದೂರದ ವಿಷಯ. ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯಾಭ್ಯಾಸ ಕೂಡ ಆಗುತ್ತಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಆಗಾಗ ದೂರುಗಳನ್ನು ಸಲ್ಲಿಸುತ್ತಿದ್ದಾರೆ. ಇದನ್ನು ಸರ್ಕಾರದ ಗಮನಕ್ಕೂ ಕೂಡ ತಂದಿದ್ದೇನೆ. ಈ ಸಂಬಂಧ ಮಾನ್ಯ ಸಚಿವರೊಂದಿಗೆ ಕೂಡ ಮಾತನಾಡಿದ್ದೇನೆ. ಆದರೆ ಏನೂ ಪ್ರಯೋಜನವಾಗಿಲ್ಲ. ಸರ್ಕಾರದ ಕಟ್ಟಡವಿಲ್ಲದೇ ವಂಚಿತರಾಗಿರುವುದು ಮತ್ತು ವಿದ್ಯಾರ್ಥಿಗಳು ತುಂಬಾ ಕಷ್ಟದಲ್ಲಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಗಮನಕ್ಕೆ ಬಂದಿಲ್ಲವೆಂಬ ತಪ್ಪು ಉತ್ತರವನ್ನು ಕೊಡುತ್ತಿದ್ದಾರೆಂದು ನಾನು ಭಾವಿಸುತ್ತಿದ್ದೇನೆ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಸದಸ್ಯರು ವಸತಿ ನಿಲಯಗಳೇ ಇಲ್ಲವೆಂದು ಹೇಳಿದ್ದಾರೆ. ಅವರ ಕ್ಷೇತ್ರದಲ್ಲಿ 14 ಹಾಸ್ಟೆಲ್‌ಗಳನ್ನು ತೆರೆದಿದ್ದೇವೆ. 14 ಹಾಸ್ಟೆಗಲ್‌ಗಳ ಪೈಕಿ 1155 ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗವನ್ನು ಮಾಡುತ್ತಿದ್ದಾರೆ. ಅವರು ಕೇಳಿದ ರೀತಿ ಮತ್ತೊಂದು ಹಾಸ್ಟೆಲ್‌ನ್ನು ಮಂಜೂರಾತಿ ಮಾಡಿದ್ದೇವೆ. ಬಾಡಿಗೆ ಕೊಠಡಿಗಳಲ್ಲಿ 10–15 ಜನ ವಿದ್ಯಾರ್ಥಿಗಳು ವಾಸ ಮಾಡುತ್ತಿದ್ದಾರೆಂದು ಹೇಳಿದರು. ಇಲ್ಲಿ ಏನಾಗಿದೆಯೆಂದರೆ ಒಂದು ಹಾಸ್ಟೆಲಿಗೆ ಕೊಠಡಿಯ ಆಧಾರದ ಮೇಲೆ 50 ವಿದ್ಯಾರ್ಥಿಗಳನ್ನು ಕೊಟ್ಟಿರುತ್ತೇವೆ. ಅನೇಕ ಶಾಸಕರು ಬಂದು ಊಟ ಕೊಡಿ, ನಾವು ಏನಾದರೂ ಮಾಡಿಕೊಳ್ಳುತ್ತೇವೆ, 25, 100 ಜನರನ್ನು enhancement ಮಾಡಿ ಎಂದು ಕೇಳುತ್ತಾರೆ. ಒಂದು ವೇಳೆ ಆಗುವುದಿಲ್ಲವೆಂದು ಹೇಳಿದರೆ ಮಕ್ಕಳು ಬೀದಿಯಲ್ಲಿ ಮಲಗುತ್ತಾರೆಂದು ಹೇಳುತ್ತಾರೆ. ಊಟ ಇಲ್ಲ, ವಸತಿಯಿಲ್ಲವೆಂದು ಬೇಡಿಕೆ ಇಡುತ್ತಾರೆ. ಆ ದೃಷ್ಟಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ 25,000 ಸಾವಿರ

ಮಕ್ಕಳಿಗೆ enhancement ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಎಲ್ಲೇ ಸ್ಥಳವಿದ್ದರೂ ನಮ್ಮ ಇಲಾಖೆಯ ಮೂಲಕ ಹಾಸ್ಟೆಲ್‌ಗಳನ್ನು ನಿರ್ಮಾಣಮಾಡುವ ಕೆಲಸವನ್ನು ಮಾಡಿದ್ದೇವೆ. KREIS ಆ ಕೆಲಸವನ್ನು ಮಾಡುತ್ತಿದೆ. ಆ ಬಗ್ಗೆ ಕೊರತೆಯಿಲ್ಲ. ಈಗಾಗಲೇ ಅವರಿಗೆ ಮತ್ತೊಂದು ಹಾಸ್ಟೆಲ್‌ನ್ನು ಮಂಜೂರಾತಿ ಮಾಡಿ ಕೊಟ್ಟಿದ್ದೇವೆ.

ಶ್ರೀ ಮಾನಪ್ಪ ವಜ್ಜಲ್: ಸರ್ಕಾರದ ಜಾಗ ಕೂಡ ಅಲ್ಲಿದೆ. ಆ ಜಾಗವಿದ್ದರೂ ಕೂಡ ಇಲ್ಲಿಯವರೆಗೂ ಯಾವ ಮಂಜೂರಾತಿ ಆಗದೇ ಸರ್ಕಾರದ ಕಟ್ಟಡಗಳನ್ನು ನಿರ್ಮಿಸಿರುವುದಿಲ್ಲ.

ಅಧ್ಯಕ್ಷರು: Identify ಮಾಡಿ ಅವರಿಗೆ ಕೊಡಿ.

ಶ್ರೀ ಮಾನಪ್ಪ ವಜ್ಜಲ್: ನಮ್ಮ ಲಿಂಗಸುಗೂರು ತಾಲ್ಲೂಕಿನಲ್ಲಿ ವೃತ್ತಿಪರ ಕಾಲೇಜ್ ಹಾಸ್ಟೆಲ್ ಸಹ ಬಹಳ ಅವಶ್ಯಕತೆ ಇದೆ. ಈಗಾಗಲೇ ಅಲ್ಲಿ GTTC, Diploma, Government ITI, BCA, Law ಕಾಲೇಜ್‌ಗಳಿದ್ದು, ಅವುಗಳಿಗೆ ವೃತ್ತಿಪರ ಹಾಸ್ಟೆಲ್‌ಗಳನ್ನು ಮಾಡಿಕೊಡಬೇಕೆಂದು ಸದನದ ಮುಖಾಂತರ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎ. ನಾರಾಯಣ ಸ್ವಾಮಿ: ಇತ್ತೀಚೆಗೆ ರಾಜ್ಯದಲ್ಲಿ, ಅರಣ್ಯದಲ್ಲಿ ಹಾಗೂ ಅರಣ್ಯ ಸುತ್ತಮುತ್ತ ವನವಾಸಿ ಶಾಲೆಗಳಿದ್ದು, ಅವು ನಗರ ಪ್ರದೇಶಕ್ಕೆ ಬಂದಿದ್ದವು. ನಗರದಲ್ಲಿ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ, ಹೋಬಳಿ ಕೇಂದ್ರಗಳಲ್ಲಿಯೂ ಇದೆ. ಇದರಿಂದ ಅನೇಕ ವಸತಿಶಾಲೆಗಳು ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದರು. 10 ಜನ ಮಕ್ಕಳಿದ್ದರೆ, ಅಲ್ಲಿ 100 ಜನ ಮಕ್ಕಳಿದ್ದಾರೆಂದು ಹೇಳಿ ಡ್ರಾ ಮಾಡುತ್ತಿದ್ದರು. ಈ ವ್ಯವಸ್ಥೆಯನ್ನು ಸರಿಪಡಿಸುವ ಸಲುವಾಗಿ 112 ಹಾಸ್ಟೆಲ್‌ಗಳನ್ನು upgrade ಮಾಡಿ ಎಲ್ಲೆಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಅವಶ್ಯಕತೆ ಇದೆಯೋ, post-matric hostel ಇರಬಹುದು, ವೃತ್ತಿ ಪರ ಹಾಸ್ಟೆಲ್ ಇರಬಹುದು, ಪ್ರತಿ ಜಿಲ್ಲೆಗೆ ನಾಲ್ಕೈದನ್ನು ಮಂಜೂರು ಮಾಡಿದ್ದೇನೆ. ಒಂದು ವೇಳೆ ಅವರಿಗೆ ಅವಶ್ಯಕತೆ ಇದ್ದರೆ ಮತ್ತೊಂದನ್ನು ಮಂಜೂರಾತಿ ಮಾಡಿ ಕೊಡುತ್ತೇನೆ.

ಅಧ್ಯಕ್ಷರು: ಡಾ. ಸಾರ್ವಭೌಮ ಬಗಲಿ ಅವರು,

ಡಾ: ಬಗಲಿ ಸಾರ್ವಭೌಮ ಸಾತಗೌಡ: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಪ್ರಶ್ನೆ ಕೇಳುತ್ತೇನೆ.